ವಿಷಯ : ಲೋಕೋಪಯೋಗಿ ಇಲಾಖೆಯ ರಸ್ತೆಗಳು, ನೀರಾವರಿ, ಕಟ್ಟಡಗಳು ಮತ್ತು ಸೇತುವೆಗಳ ಕಾಮಗಾರಿಗಳಿಗೆ ಕೋಲಾರ ಜಿಲ್ಲೆಗೆ ನಿಗದಿ ಪಡಿಸಿದ ಅನುದಾನ ವೆಚ್ಚ ಕುರಿತು.

ಪ್ರಶ್ನೆ : 196(667) ಶ್ರೀ ಎ. ನಾಗರಾಜು (ಮಾಲೂರು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಕಾಮಗಾರಿಗಳಾದ ರಸ್ತೆಗಳು, ನೀರಾವರಿ, ಕಟ್ಟಡಗಳು, ಮತ್ತು ಸೇತುವೆಗಳ ಕೆಲಸಗಳಿಗಾಗಿ 1983ರ ಡಿಸೆಂಬರ್ ಅಂತ್ಯದವರೆಗೆ ಒದಗಿಸಲಾದ ಅನುದಾನಗಳ ಮೊತ್ತ.

ಆ) ಮೇಲೆ ಕಾಣಿಸಿರುವ ಉದ್ದಿಶ್ಯಕ್ಕಾಗಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ವಿಭಾಗಗಳಿಗಿ ಒದಗಿಸಲಾಗಿರುವ ಅನುದಾನಗಳ ಮೊತ್ತ.

(ಪ್ರತಿ ತಾಲ್ಲೂಕಿಗೆ ಸಂಬಂಧಿಸಿದಂತೆ ವಿವರಗಳನ್ನು ಕೊಡುವುದು).

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ವಿವರಗಳು ಈ ಕೆಳಕಂಡಂತಿವೆ.

1)	ರಸ್ತೆಗಳು	— — —	200 19 ಲಕ್ಷ ರೂ.ಗಳು
2)	ಕಟ್ಟಡಗಳು	— — —	83 60 "
3)	ಸೇತುವೆಗಳು	— — —	27.44 "
4)	ಸಣ್ಣ ನೀರಾವರಿ	— — —	102.09 "
		ಒಟ್ಟು	413.32 "

ಆ) ವಿವರಗಳು ಈ ಕೆಳಕಂಡಂತಿವೆ.

ತಾಲ್ಲೂಕು	ರಸ್ತೆಗಳು	ಕಟ್ಟಡಗಳು (ಅನುದಾನ ಲಕ್ಷ ರೂ.ಗಳಲ್ಲಿ)	ಸೇತುವೆಗಳು	ಸಣ್ಣ ನೀರಾವರಿ
1	2	3	4	5
ಚಿಕ್ಕಬಳ್ಳಾಪುರ ವಿಭಾಗ				
1) ಚಿಕ್ಕಬಳ್ಳಾಪುರ	26.15	20.42	3.35	8.04
2) ಗುಡಿಬಂಡೆ		—	—	3.87
3) ಶಿಡ್ಲಘಟ್ಟ	17.92	3.33	0.66	10.95
4) ಗೌರಿಬಿದನೂರು	26.35	8.28	0.50	19.72
5) ಚಿಂತಾಮಣಿ	20.91	8.18	0.50	12.72
6) ಬಾಗೇಪಲ್ಲಿ	23.16	3.31	0.20	16.87
	114.49	43.52	5.21	72.17
ಕೋಲಾರ ವಿಭಾಗ				
7) ಕೋಲಾರ	21.31	11.95	5.30	6.21
8) ಮಾಲೂರು	15.41	3 83	6.12	4 38
9) ಬಂಗಾರುಪೇಟೆ	20.82	16.62	7 10	5.73
10) ಮುಳಬಾಗಿಲು	13.24	5.25	2.68	6.21
11) ಶ್ರೀನಿವಾಸಪುರ	14.92	2.43	1.03	7.39
	85.70	40.08	22.23	29.92
ಒಟ್ಟು ಮೊತ್ತ	200.19	83.60	27.44	102.09 = 413.32

ಶ್ರೀ ಎನ್. ನಾಗರಾಜ್.— ಮಾನ್ಯ ಅಧ್ಯಕ್ಷರೇ, ಈ ಕಾಮಗಾರಿಗಳಿಗಾಗಿ ಕೋಲಾರ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೂ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುತಕ್ಕ ಪಟ್ಟಿಯನ್ನು ಕೊಟ್ಟಿದ್ದೀರಿ, ಅದರಲ್ಲಿ ಬಹಳಷ್ಟು ತಾರತಮ್ಯವಾಗಿದೆ. ಮಾಲೂರು ತಾಲ್ಲೂಕಿಗೆ ಬಹಳಷ್ಟು ಹಣವನ್ನು ಕಡಿಮೆ ಕೊಟ್ಟಿದ್ದೀರಿ, ಆದ್ದರಿಂದ ಮುಂದಿನ ಸಾಲಿನ ಅಂದರೆ 1985–86ನೇ ಸಾಲಿನ ಆಯವ್ಯಯದಲ್ಲಿ ಮಾಲೂರು ತಾಲ್ಲೂಕಿಗೆ ಈಗ ಕಡಿಮೆ ಕೊಟ್ಟಿರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು, ಹೆಚ್ಚಿಗೆ ಕೊಡುವುದಕ್ಕೆ ಪ್ರಾವಿಷನ್ ಮಾಡುತ್ತೀರಾ ಎಂದು ಕೇಳುವುದಕ್ಕೆ ಇಷ್ಟ ಪಡ ತ್ತೇನೆ.

ಶ್ರೀ ಹೆಚ್. ಡಿ ದೇವೇಗೌಡ ಅಧ್ಯಕ್ಷರೇ, ಆ ರೀತಿಯಲ್ಲಿ ಎನ್ನು ತಾರತಮ್ಯ ಮಾಡಿಲ್ಲ. ಕೆಲಸಕ್ಕೆ ಅವಶ್ಯಕತೆಗನುಗುಣವಾಗಿ ನೋಡಿಕೊಂಡು ಹಣವನ್ನು ಒದಗಿಸುತ್ತೇವೆ.

ಶ್ರೀ ಎನ್. ನಾಗರಾಜ್. 1984 85ನೇ ಇಸವಿಯಲ್ಲಾದರೂ ಮಾಲೂರು ತಾಲ್ಲೂಕಿಗೆ ಆದ್ಯತೆ ಕೊಟ್ಟು ಹೆಚ್ಚಿಗೆ ಪ್ರಾವಿಷನ್ ಮಾಡುತ್ತೀರಾ ?

ಶ್ರೀ ಹೆಚ್. ಡಿ ದೇವೇಗೌಡ — ನಾನು ಈಗಾಗಲೇ ಹೇಳಿರುವ ಹಾಗೆ ಕೆಲಸ ಹೆಚ್ಚಿಗೆ ಇರುವ ಕಡೆ ಸ್ವಲ್ಪ ಹೆಚ್ಚಿಗೆ ಕೊಟ್ಟಿದ್ದೇವೆ. ತಾವು ಸಹ ಯಾವ ಯಾವ ಕೆಲಸವನ್ನು ಮಾಡಬೇಕಾಗಿದೆ ಎನ್ನುವ ಬಗ್ಗೆ ಪಟ್ಟಿಯೊಂದನ್ನು ಕಳುಹಿಸಿದರೆ ಅದನ್ನು ಸೇರಿಸುತ್ತೇವೆ.

ವಿಷಯ : ಗಾಜನೂರು ತುಂಗಾ ಮೇಲ್ದಂಡೆ ಯೋಜನೆ

ಪ್ರಶ್ನೆ : 197(471) ಶ್ರೀ ಬಿ. ಜಿ. ಬಣಕಾರ್ (ಹಿರೇಕೇರೂರು) : ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ : —

ಅ) ಗಾಜನೂರು ತುಂಗಾ ಮೇಲ್ದಂಡೆ ಯೋಜನೆಯಲ್ಲಿ, ಧಾರವಾಡ ಜಿಲ್ಲಾ ಹಿರೇಕೇರೂರು ತಾಲ್ಲೂಕುಗಳಲ್ಲಿ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಎಕರೆ ನೀರಾವರಿಯಲ್ಲಿ ಬರುತ್ತದೆ;

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಪೂರ್ವಭಾವಿಯಾಗಿ ತುಂಗಾ ಮೇಲ್ದಂಡೆ ಗಾಜನೂರು ಯೋಜನೆಯ ವಿಭಾಗವನ್ನು ಎಂದು ಪ್ರಾರಂಭಿಸಲಾಗುವುದು;

ಇ) ಈ ಯೋಜನೆಯಲ್ಲಿ ನೀರಾವರಿಗೆ ಒಳಪಡುವ ತಾಲ್ಲೂಕುಗಳ ಹಾಗೂ ಆಯಾ ತಾಲ್ಲೂಕಿನಲ್ಲಿ ನೀರಾವರಿಯಾಗುವ ಹಳ್ಳಿಗಳ ಸಂಖ್ಯೆ ಹಾಗೂ ಹೆಸರುಗಳಾವುವು ;

ಈ) ಹಾಗಿದ್ದಲ್ಲಿ, ಈ ಯೋಜನೆ ಯಶಸ್ವಿಯಾಗುವ ಸಲುವಾಗಿ ಸರ್ಕಾರದವರು ಯಾವ ಯಾವ ಕ್ರಮ ತೆಗೆದುಕೊಂಡಿದ್ದಾರೆ ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) –

ಅ) ಹಿರೇಕೇರೂರು ತಾಲ್ಲೂಕಿನಲ್ಲಿ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಪ್ರಾರಂಭಿಕ ಅನ್ವೇಷಣೆ ಯಂತೆ, ಸುಮಾರು 33,000 ಎಕರೆ ನೀರಾವರಿಯಾಗುವ ಸಾಧ್ಯತೆ ಇದೆ. ಆಚ್ಚುಕಟ್ಟು ಪ್ರದೇಶದ ಅನ್ವೇಷಣೆ ಇನ್ನೂ ಮುಗಿದಿಲ್ಲದಿರುವುದರಿಂದ, ಗ್ರಾಮವಾರು ನೀರಾವರಿ ವಿಸ್ತೀರ್ಣ ಲಭ್ಯವಿಲ್ಲ.

ಆ) ಅನ್ವೇಷಣೆ ಮುಗಿದ ನಂತರ, ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಪ್ರಾರಂಭಿಕ ಅನ್ವೇಷಣೆಯಂತೆ ನೀರಾವರಿಗೆ ಒಳಪಡುವ ತಾಲ್ಲೂಕುಗಳ ತಾತ್ಕಾಲಿಕ ವಿವರ ಹೀಗಿದೆ :

1. ಶಿವಮೊಗ್ಗ 2. ಹೊನ್ನಾಳಿ 3. ಹಿರೇಕೇರೂರು 4. ರಾಣೆಬೆನ್ನೂರು
5. ಹಾವೇರಿ 6. ಹಾನಗಲ್. ಸವಿಸ್ತಾರ ಅನ್ವೇಷಣೆ ಮುಗಿದಿಲ್ಲದಿರುವುದರಿಂದ, ಹಳ್ಳಿಗಳ ಹೆಸರುಗಳನ್ನು ಈ ಹಂತದಲ್ಲಿ ನೀಡಲು ಸಾಧ್ಯವಿಲ್ಲ.

ಈ) ಯೋಜನೆಯ ಸವಿಸ್ತಾರ ಅನ್ವೇಷಣೆಯನ್ನು ಕೈಗೊಳ್ಳಲಾಗಿದೆ

ಶ್ರೀ ಬಿ. ಜಿ. ಬಣಕಾರ್.—ಅಧ್ಯಕ್ಷರೇ, ಇದರ ಬಗ್ಗೆ ತನಿಖೆ ಸುಮಾರು 10 ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ ಈ ತನಿಖೆಯನ್ನು ಆದಷ್ಟು ಬೇಗ ಮುಗಿಸಿ ಅಪ್ಪರ್ ತುಂಗಾ ಪ್ರಾಜೆಕ್ಟನ್ನು ಮುಗಿಸಿ ಜನರಿಗೆ ಅನುಕೂಲ ಮಾಡಿಕೊಡುತ್ತೀರಾ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.— ಅಧ್ಯಕ್ಷರೇ, ಈಗಾಗಲೇ ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರಾದ ಶ್ರೀ ರಾಮ್‌ದೇವ್‌ರವರಿಗೆ ಉತ್ತರ ಕೊಟ್ಟಿದ್ದೇನೆ. ಈ ಯೋಜನೆಯನ್ನು 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಸಾಧ್ಯವೇ ಎನ್ನುತಕ್ಕದ್ದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಇದು ಅಪ್ಪರ್ ತುಂಗಾ ಪ್ರಾಜೆಕ್ಟ್‌ನ ರಿಪೋರ್ಟನ್ನು ಮೂರು ತಿಂಗಳಲ್ಲಿ ತಯಾರು ಮಾಡಿ ಕೊಡಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅವರು ಇದಕ್ಕಾಗಿ ಎಲ್ಲಾ ಕಾಲವನ್ನು ವಿನಿಯೋಗ ಮಾಡುತ್ತಿದ್ದಾರೆ. ಪ್ರಾಜೆಕ್ಟ್ ರಿಪೋರ್ಟ್ ಬಂದ ಮೇಲೆ ಅಪ್ಪರ್ ತುಂಗಾ ಪ್ರಾಜೆಕ್ಟನ್ನು ತೆಗೆದುಕೊಳ್ಳುವ ಬಗ್ಗೆ ಆದೇಶ ಕೊಡುತ್ತೇನೆ.

ಶ್ರೀ ಡಿ.ಜಿ. ಬಸವನಗೌಡ — ನಾವೆಲ್ಲಾ ಈ ಯೋಜನೆ ಕೆಳಗೆ ಬರತಕ್ಕಂಥ ಕ್ಷೇತ್ರದ ಶಾಸಕರು. ಕಾರಣ ಇಷ್ಟೇ. ಸುಮಾರು ಮೂವತ್ತು ವರ್ಷಗಳಿಂದ, ಈ ವರ್ಷ ಮಾಡುತ್ತೇವೆ. ಮುಂದಿನ ವರ್ಷ